# <u>ಕರ್ನಾಟಕ ಲೋಕಾಯುಕ್ತ</u>

**ಸಂ. ಕಂಪ್ಲೇಂಟ್/ಉಪಲೋಕ್/ಬಿಡಿ/1757/2021**
**ಪಿ.ಓ.ಎ.ಆರ್.ಇ–06 (ಮಂಡನಾಧಿಕಾರಿಗಳ ಶಾಖೆ).**

ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ:28/03/2022.
6.4.2022

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ

**ವಿಷಯ:** ಶ್ರೀ. ವಿಜಯಕುಮಾರ್ ಬಿನ್ ದಿ: ಜೆ.ಜಗನ್ನಾಥ್, ಜ್ಯೂನಿಯರ್ ಇಂಜಿನಿಯರ್, (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಶಿಕಾರಿಪುರ ಉಪವಿಭಾಗ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ), ಹಾಲಿ ಕರ್ತವ್ಯ: ಬಿ.ಬಿ.ಎಂ.ಪಿ. ಗೋವಿಂದರಾಜ ನಗರ, ಬೆಂಗಳೂರುರವರು ದುರ್ನಡತೆ / ದುರ್ವರ್ತನೆ ತೋರಿದ ಬಗ್ಗೆ.

****

1. ಶಿವಮೊಗ್ಗ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ **ಶ್ರೀ. ವಿಜಯಕುಮಾರ್ ಬಿನ್ ದಿ: ಜೆ.ಜಗನ್ನಾಥ್,** ಜ್ಯೂನಿಯರ್ ಇಂಜಿನಿಯರ್, (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಶಿಕಾರಿಪುರ ಉಪವಿಭಾಗ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ), ಹಾಲಿ ಕರ್ತವ್ಯ: ಬಿ.ಬಿ.ಎಂ.ಪಿ. ಗೋವಿಂದರಾಜ ನಗರ, ಬೆಂಗಳೂರು, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ). **ಶ್ರೀ. ಜಗದೀಶ್ ನಾಯ್ಕ್ ಬಿನ್ ಹನುಮ ನಾಯ್ಕ್, ಕಂಟ್ರಾಕ್ಟರ್ ಕೆಲಸ, ಉಡುಗಣಿ ವಾಸಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಅವರ ಕೆಲಸದ ನಿಮಿತ್ತ ಭೇಟಿಮಾಡಿದಾಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ತನಿಖೆ ಕೈಗೊಂಡಿದೆ.

2. **<u>ಪ್ರಕರಣದ ಸಂಕ್ಷಿಪ್ತ ಸಾರಾಂಶ</u> :-**

i) ದೂರುದಾರರಾದ **ಶ್ರೀ. ಜಗದೀಶ್ ನಾಯ್ಕ್ ಬಿನ್ ಹನುಮ ನಾಯ್ಕ್** ಇವರು ಖಾಸಗಿ ಗುತ್ತಿಗೆದಾರರಾಗಿ ಜೀವನ ನಡೆಸುತ್ತಿದ್ದು, ಶಿಕಾರಿಪುರ ತಾಲ್ಲೂಕಿನ ತುಮುರಿಹೊಸೂರು ಗ್ರಾಮದಲ್ಲಿ ಮಾತಂಗಮ್ಮನ ದೇವಸ್ಥಾನದ ಗರ್ಭಗುಡಿ ನಿರ್ಮಾಣ ಮಾಡಲು ಮುಜರಾಯಿ ಇಲಾಖೆಯಿಂದ 3,00,000/- ರೂ. ವಿಶೇಷ ಅನುದಾನ ಬಿಡುಗಡೆಯಾಗಿರುತ್ತದೆ. ಸದರಿ ಕಾಮಗಾರಿಯನ್ನು ನಿರ್ವಹಿಸಲು ದೇವಸ್ಥಾನದ

ಕಮಿಟಿಯವರು ದೂರುದಾರರಿಗೆ ಗುತ್ತಿಗೆ ನೀಡಿರುತ್ತಾರೆ. ಸದರಿ ಕಾಮಗಾರಿಯ ಅನುದಾನದ ಅಂದಾಜು ಪಟ್ಟಿಯನ್ನು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಿಂದ ವರದಿ ತಯಾರಿಸಿ, ಶಿಕಾರಿಪುರ ತಾಲ್ಲೂಕು ಕಛೇರಿ ಮುಖಾಂತರ ಶಿವಮೊಗ್ಗ ಜಿಲ್ಲಾಧಿಕಾರಿಯವರ ಕಛೇರಿಗೆ ಕಳುಹಿಸಿರುತ್ತಾರೆ. ಸದರಿ ಕಾಮಗಾರಿಯನ್ನು ಪ್ರಾರಂಭಿಸಲು ಅನುಮತಿ ನೀಡಲು ಎದುರುದಾರರು ದಿ: 15/04/2018ರಂದು ಅವರ ಮೊಬೈಲ್ ನಂ.94832 19749ರಿಂದ ದೂರುದಾರರ ಮೊಬೈಲ್ ನಂ.84978 04925ಕ್ಕೆ ಕರೆಮಾಡಿ, ಕಾಮಗಾರಿಯ ಕೆಲಸ ಪ್ರಾರಂಭಿಸಲು ಅನುಮತಿ ನೀಡಲು ಹಾಗೂ ಕಾಮಗಾರಿಯ ಅಂದಾಜು ಪಟ್ಟಿಗೆ ಎದುರುದಾರರೇ ಮೇಲಾಧಿಕಾರಿಗಳಿಗೆ ಹೇಳಿ ಅನುಮತಿಯನ್ನು ಕೊಡಿಸಿರುತ್ತೇನೆಂದು ಮತ್ತು ಈ ಹಿಂದೆ ದೂರುದಾರರು ಶಿಕಾರಿಪುರ ತಾಲ್ಲೂಕಿನ ಭೋಗಿಗ್ರಾಮದಲ್ಲಿ ಉರ್ದು ಶಾಲೆಯ ಕಟ್ಟಡ ನಿರ್ಮಾಣದ ಕಾಮಗಾರಿಗೆ ಸಂಬಂಧಪಟ್ಟಂತೆ ಮೊದಲನೇ ಬಿಲ್ ಮಂಜೂರಾಗಿದ್ದು, ಈ ಎರಡೂ ಕಾಮಗಾರಿಗೆ ಸಂಬಂಧಪಟ್ಟಂತೆ ಎದುರುದಾರರು ದೂರುದಾರರಿಗೆ ಹಣಕೊಡಿ ಹಾಗೂ ಹಣವನ್ನು ಈ ಹಿಂದೆ ಕೆಲಸ ಮಾಡಿರುವ ಕಂಟ್ರಾಕ್ಟರ್‌ನ್ನು ಎಷ್ಟು ಎಂದು ತಿಳಿದು ಕೇಳಿಕೊಡಿ ಎಂದು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಆಗ ದೂರುದಾರರು ಅವರ ಮೊಬೈಲ್‌ನಲ್ಲಿ ಮೇಲ್ಕಂಡ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣ ನೀಡಲು ಇಷ್ಟವಿಲ್ಲದ್ದರಿಂದ, ದೂರುದಾರರು ದಿ: 17/04/2018ರಂದು ಶಿವಮೊಗ್ಗ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಪೊಲೀಸ್ ಉಪಾಧೀಕ್ಷಕರಿಗೆ ದೂರನ್ನು ಸಲ್ಲಿಸಿದ್ದು, ಸದರಿ ಠಾಣೆಯ ಠಾಣಾಧಿಕಾರಿಗಳು ಅವರ ಠಾಣೆಯ ಗುನ್ನೆ ನಂ.05/2018 ರಲ್ಲಿ ಕಲಂ 7, 13(1)(ಡಿ) ಸಹಿತ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರಡಿಯಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ii) ದಿ: 17/04/2018 ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಸಮಯದಲ್ಲಿ ಇಬ್ಬರು ಪಂಚರನ್ನು ಠಾಣೆಗೆ ಕರೆಯಿಸಿ, ದೂರುದಾರರನ್ನು ಪರಿಚಯಿಸಿ, ಪಂಚರಿಗೆ ದೂರಿನ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ ನಂತರ, ಪಂಚಸಾಕ್ಷಿದಾರರು ಪಂಚರಾಗಿ ಸಹಕರಿಸಲು ಒಪ್ಪಿಕೊಂಡಿರುತ್ತಾರೆ. ತನಿಖಾಧಿಕಾರಿಯ ಸೂಚನೆ ಮೇರೆಗೆ ದೂರುದಾರರು ಮೊಬೈಲನ್ನು ಹಾಜರುಪಡಿಸಿದ್ದು, ಸದರಿ ಮೊಬೈಲ್ ನಲ್ಲಿರುವ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿ, ಆ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ಕಂಪ್ಯೂಟರ್ ಮೂಲಕ ಎರಡು ಸಿ.ಡಿ.ಗಳಿಗೆ ವರ್ಗಾಯಿಸಿ, ಆ ಎರಡು ಸಿ.ಡಿ.ಗಳನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ಈ ದಿನ ದಿ:17/04/2018ರಂದು ದೂರುದಾರರ ಮೊಬೈಲ್ ನಂ.74978 04925ರಿಂದ ಎರಡು ಬಾರಿ ಎದುರುದಾರರ ಮೊಬೈಲ್ ನಂ.94832 19749ಕ್ಕೆ ಕರೆಮಾಡಿದಾಗ, ಎದುರುದಾರರು ಲಂಚದ ಹಣವನ್ನು ಕೇಳಿದ್ದು, ಅದನ್ನು ದೂರುದಾರರು ಧ್ವನಿಮುದ್ರಿಸಿಕೊಂಡಿರುತ್ತಾರೆ. ಆ

ಸಂಭಾಷಣೆ ಇರುವ ಮೊಬೈಲ್‌ನ್ನು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದ್ದು, ಅದನ್ನು ಎಲ್ಲರಿಗೂ ಕೇಳಿಸಿ, ಆ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ಕಂಪ್ಯೂಟರ್ ಮೂಲಕ ನಾಲ್ಕು ಸಿ.ಡಿ.ಗಳಿಗೆ ವರ್ಗಾಯಿಸಿರುತ್ತಾರೆ. ಆ ಸಿ.ಡಿ.ಗಳನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯವರ ಮುಂದೆ ಎದುರುದಾರರಿಗೆ ಲಂಚದ ಹಣವಾಗಿ ನೀಡಬೇಕಾಗಿರುವ 10,000/- ರೂ. ಗಳನ್ನು (500/- ರೂ. ಮುಖಬೆಲೆಯ 20 ನೋಟುಗಳು) ದೂರುದಾರರು ಹಾಜರುಪಡಿಸಿರುತ್ತಾರೆ. ಪಂಚಸಾಕ್ಷಿದಾರರು ಸದರಿ ನೋಟುಗಳ ವಿವರಗಳನ್ನು ಹಾಳೆಯಲ್ಲಿ ಮತ್ತು ಸಿಬ್ಬಂದಿ ಪಂಚನಾಮೆಯಲ್ಲಿ ನಮೂದಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯ ಸೂಚನೆಯಂತೆ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿದ ನಂತರ, ಆ ನೋಟುಗಳನ್ನು ಪಂಚಸಾಕ್ಷಿ-2ರವರ ಮೂಲಕ ದೂರುದಾರರು ಧರಿಸಿದ್ದ ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಇಡಿಸಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರನ್ನು ಭೇಟಿಮಾಡಿ ಕಾಮಗಾರಿಯ ಬಗ್ಗೆ ಕೇಳಬೇಕು, ಆಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟರೆ, ಪುಡಿಲೇಪಿತ ನೋಟುಗಳನ್ನು ಅವರಿಗೆ ಕೊಡಬೇಕೆಂದು, ಅವರು ಸ್ವೀಕರಿಸಿದರೆ, ಅಲ್ಲಿಂದ ಹೊರಬಂದು ಕೈಯಿಂದ ಮುಖವನ್ನು ಒರೆಸಿಕೊಳ್ಳುವ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಮತ್ತು ಎದುರುದಾರರನ್ನು ಭೇಟಿಮಾಡಲು ಹೋಗುವಾಗ, ಮೊಬೈಲ್‌ನ್ನು ಚಾಲನಾ ಸ್ಥಿತಿಯಲ್ಲಿಟ್ಟುಕೊಂಡು ಹೋಗಿ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಳ್ಳಲು ತಿಳಿಸಿದ್ದಲ್ಲದೇ, ನೆರಳುಸಾಕ್ಷಿಗೆ ದೂರುದಾರರ ಜೊತೆ ಹೋಗಿ ದೂರುದಾರ ಮತ್ತು ಎದುರುದಾರರ ನಡುವೆ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿರುತ್ತಾರೆ. ಎಲ್ಲಾ ಔಚಿತ್ಯಪೂರ್ವ ನಡವಳಿಕೆಗಳನ್ನು ದೂರುದಾರರು, ನೆರಳುಸಾಕ್ಷಿ, ಹಾಗೂ ಪಂಚರ ಸಮಕ್ಷಮ ನಿರ್ವಹಿಸಿರುತ್ತಾರೆ.

iii) ದಿ: 17/04/2018ರಂದು ದೂರುದಾರರು, ನೆರಳು ಮತ್ತು ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಯವರು ಶಿಕಾರಿಪುರದ ಚನ್ನಕೇಶವ ನಗರಕ್ಕೆ 7.10 ಗಂಟೆಗೆ ಬಂದು ಎದುರುದಾರರ ಮನೆಯಿಂದ ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ ದೂರುದಾರರಿಗೆ ಮತ್ತು ನೆರಳುಸಾಕ್ಷಿಗೆ ಮತ್ತೊಮ್ಮೆ ಸೂಚನೆಗಳನ್ನು ನೆನಪಿಸಿ ಎದುರುದಾರರ ಬಳಿ ಕಳುಹಿಸಿರುತ್ತಾರೆ. ದೂರುದಾರ ಮತ್ತು ನೆರಳುಸಾಕ್ಷಿ ಎದುರುದಾರರ ಮನೆಯ ಒಳಗೆ ಹೋದಾಗ, ಎದುರುದಾರರ ಮನೆಯಲ್ಲಿ ಎದುರುದಾರರು ಚೇರ್‌ಮೇಲೆ ಕುಳಿತುಕೊಂಡಿದ್ದು, ಅವರ ಜೊತೆ ಇನ್ನಿಬ್ಬರು ವ್ಯಕ್ತಿಗಳಿದ್ದು, ದೂರುದಾರರನ್ನು ನೋಡಿದ ಕೂಡಲೇ ಅವರು ಹೊರಟುಹೋಗಿದ್ದು, ಎದುರುದಾರರು ಕೈಸನ್ನೆ ಮೂಲಕ ದೂರುದಾರರಿಗೆ ಹಣವನ್ನು ಕೇಳಿದ್ದು, ಆಗ ದೂರುದಾರರು ಅವರ ಬಳಿಯಿದ್ದ ಪುಡಿಲೇಪಿತ ನೋಟುಗಳನ್ನು ಎದುರುದಾರರಿಗೆ ನೀಡಿದಾಗ ಎದುರುದಾರರು ಬಲಗೈಯಲ್ಲಿ ಪಡೆದುಕೊಂಡು, ಕೈಯಲ್ಲಿ ಹಿಡಿದು ಹತ್ತು ಇದೆಯಾ ಅಂದಾಗ, ದೂರುದಾರರು ಎಣಿಸ್ಕೋಳ್ರಿ ಎಂದಿದ್ದು,

ಎದುರುದಾರರು ಇರ್ಲಿ ಇರ್ಲಿ ಅಂದು, ದೂರುದಾರರು ಮತ್ತೆ ಎಣಿಸ್ಕೋಳ್ಳಿ ಸಾರ್ ಅಂದಾಗ ಇರ್ಲಿ ಬಿಡಪ್ಪ ಅಂದಾಗ, ದೂರುದಾರರು ನಂಬಿಕೆ ಅಲ್ಲಾ ಸಾರ್ ದುಡ್ಡಿನ ವ್ಯವಹಾರ ನಿಮಗೆ ಗೊತ್ತಲ್ಲ ಅಂದಾಗ, ದೂರುದಾರರು ಮತ್ತೆ ಕಣ್ಣುಮುಂದೆ ಎಣಿಸಿಕೊಳ್ಳಿ ಸಾರ್ ಅಂದಾಗ ಇರ್ಲಪಾ ಎಂದು ಎದುರುದಾರರು ತಿಳಿಸಿರುತ್ತಾರೆ. ನಂತರ ದೂರುದಾರರು ಮನೆಯಿಂದ ಹೊರಬಂದು ಮುಖ ಒರೆಸಿಕೊಳ್ಳುವ ಮೂಲಕ ಸನ್ನೆ ಮಾಡಿದ್ದು, ಆಗ ತನಿಖಾಧಿಕಾರಿಗಳು, ಪಂಚಸಾಕ್ಷಿ ಮತ್ತು ಸಿಬ್ಬಂದಿಗಳೊಂದಿಗೆ ಧಾವಿಸಿ ದೂರುದಾರರ ಬಳಿ ಬಂದಿದ್ದು, ದೂರುದಾರರು ತೋರಿಸಿದ ಎದುರುದಾರರನ್ನು ವಶಕ್ಕೆ ಪಡೆದು, ಗುರುತಿನ ಚೀಟಿಯನ್ನು ತೋರಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ. ನಂತರ, ತನಿಖಾಧಿಕಾರಿಯು ಸಿಬ್ಬಂದಿ ಸಹಾಯದಿಂದ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಮೂರು ಗಾಜಿನ ಬಟ್ಟಲುಗಳಲ್ಲಿ ಪಡೆದುಕೊಂಡು, ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ, ಅ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ಬದಲಾವಣೆ ಆಗಿರುತ್ತದೆ. ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ, ಅ ದ್ರಾವಣವು ಯಾವುದೇ ಬಣ್ಣಕ್ಕೆ ಬದಲಾವಣೆ ಆಗಿರುವುದಿಲ್ಲ. ತನಿಖಾಧಿಕಾರಿಯವರು ಪ್ರತ್ಯೇಕವಾಗಿ ಆ ದ್ರಾವಣಗಳನ್ನು ವಶಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯು ದೂರುದಾರರಿಂದ ಪಡೆದ ಹಣದ ಬಗ್ಗೆ ವಿಚಾರಿಸಿ, ಹಾಜರುಪಡಿಸಲು ತಿಳಿಸಿದಾಗ ಎದುರುದಾರರು ಅವರ ಮನೆಯ ಕಿಚನ್ ವರಾಂಡದಲ್ಲಿರುವ ಫ್ರಿಡ್ಜ್‌ನ ಮೇಲಿಟ್ಟಿದ್ದ ಸಿರಾ ಹೆಲ್ತ್ ಕೇರ್ ಬಾಕ್ಸಿನ ಮೇಲೆ ಇಟ್ಟಿರುವುದಾಗಿ ತಿಳಿಸಿದ್ದು, ತನಿಖಾಧಿಕಾರಿಗಳು ಪಂಚಸಾಕ್ಷಿ ಅನಿಲ್ ಮುಖಾಂತರ ಆ ಹಣವನ್ನು ತೆಗೆಸಿ, ಸದರಿ ಹಣದ ನೋಟುಗಳ ವಿವರಗಳು ಪ್ರಾಯೋಗಿಕ ಪಂಚನಾಮೆಯಲ್ಲಿ ನಮೂದಿಸಿದ ನೋಟುಗಳ ವಿವರಗಳಿಗೆ ತಾಳೆಯಾಗಿದ್ದರಿಂದ, ಆ ನೋಟುಗಳನ್ನು ತನಿಖಾಧಿಕಾರಿಯು ವಶ ಪಡಿಸಿಕೊಂಡಿರುತ್ತಾರೆ. ನಂತರ ಸಿಬ್ಬಂದಿ ಮುಖಾಂತರ ಹತ್ತಿಯಿಂದ ಹಣ ಇಟ್ಟಿದ್ದ ಸ್ಥಳವನ್ನು ಒರೆಸಿ, ಆ ಹತ್ತಿಯನ್ನು ಮೂರನೇ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಅದ್ದಿಸಿದಾಗ, ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಆ ದ್ರಾವಣವನ್ನು ಮತ್ತು ಹತ್ತಿಯನ್ನು ತನಿಖಾಧಿಕಾರಿಯು ವಶಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯು ಪ್ರಾಯೋಗಿಕಾ ಪಂಚನಾಮೆ ಸಮಯದಲ್ಲಿ ಪಡೆದ ಸಿ.ಡಿ.ಗಳಲ್ಲಿರುವ ಸಂಭಾಷಣೆಯನ್ನು ಎದುರುದಾರರ ಮೇಲಾಧಿಕಾರಿಯಾದ ಶ್ರೀ. ಶಿವಕುಮಾರ್‌ರವರಿಗೆ ಕೇಳಿಸಲಾಗಿ, ಅವರು ಎದುರುದಾರರ ಧ್ವನಿಯನ್ನು ಗುರುತಿಸಿರುತ್ತಾರೆ. ತನಿಖಾಧಿಕಾರಿಯು ಎದುರುದಾರರಿಗೆ ಟ್ರ್ಯಾಪ್ ಸಮಯದಲ್ಲಿ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿದ್ದ ಮೊಬೈಲ್‌ನ್ನು ಹಾಜರುಪಡಿಸಿದ್ದು, ಅದನ್ನು ಎಲ್ಲರಿಗೂ ಕೇಳಿಸಿ, ಆ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ಆ ಸಂಭಾಷಣೆಯಲ್ಲಿರುವ ಎದುರುದಾರರ ಧ್ವನಿಯನ್ನು ಅವರ ಮೇಲಾಧಿಕಾರಿ ಗುರುತಿಸಿರುತ್ತಾರೆ ಹಾಗೂ ಆ ಸಂಭಾಷಣೆಯನ್ನು

ಕಂಪ್ಯೂಟರ್ ಮೂಲಕ ಎರಡು ಸಿ.ಡಿ.ಗಳಿಗೆ ವರ್ಗಾಯಿಸಿ, ಆ ಸಿ.ಡಿ.ಗಳನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ.

iv) ತನಿಖಾಧಿಕಾರಿಯವರು ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದಾಗ, ಎದುರುದಾರರು ಅವರ ಸಮಜಾಯಿಷಿಯಲ್ಲಿ "ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀ. ನರಸಿಂಗನಾಯ್ಕ್‌ರವರು ಬೇರೆಯವರ ಹೆಸರಿಗೆ ಅವರ ಅನುದಾನದಡಿಯಲ್ಲಿ ಸುಮಾರು 15.00 ಲಕ್ಷ ರೂ. ಅಂದಾಜು ಪಟ್ಟಿಮಾಡಿ, ಕಾಮಗಾರಿ ನಿರ್ವಹಿಸಲು ಹೇಳಿರುತ್ತೇನೆ. ಕಾಮಗಾರಿ ಮಾಡದೇ ಬಿಲ್ ಮಾಡಲು ನನಗೆ ಜೀವ ಬೆದರಿಗೆ ಹಾಕುತ್ತಿದ್ದು, ನನ್ನ ಮೇಲಾಧಿಕಾರಿಯಾದ ಜಿಲ್ಲಾ ಪಂಚಾಯತ್ ಶಿವಮೊಗ್ಗ ಮುಖ್ಯಾಧಿಕಾರಿಗೆ ಜನವರಿ 2017 ರಂದು ದೂರು ಕೂಡ ಸಲ್ಲಿಸಿರುತ್ತೇನೆ. ನಾನು ಮನೆಯಲ್ಲಿದ್ದಾಗ ಜಿಲ್ಲಾ ಪಂಚಾಯತ್ ಕಡೆಯವರು ಮನೆಗೆ ನುಗ್ಗಿ ನನಗೆ ಗೊತ್ತಾಗದ ಹಾಗೆ ಹಣ ಇಟ್ಟು ಹೋಗಿರುತ್ತಾರೆ. ಜಿಲ್ಲಾ ಪಂಚಾಯತ್ ಸದಸ್ಯರ ಕಡೆಯವರು ನಾಲ್ಕು ಜನ ಮನೆಗೆ ನುಗ್ಗಿ ಜೀವ ಬೆದರಿಕೆ ಹಾಕಿ, ನನಗೆ ಗೊತ್ತಿರದ ಹಾಗೆ ಹಣ ಇಟ್ಟು, ಟ್ರ್ಯಾಪ್ ಮಾಡಿಸಿರುತ್ತಾರ" ಎಂದು ಬರೆದುಕೊಟ್ಟಿರುತ್ತಾರೆ. ಸದರಿ ಸಮಜಾಯಿಷಿಯನ್ನು ದೂರುದಾರರು ಮತ್ತು ನೆರಳುಸಾಕ್ಷಿ ಅಲ್ಲಗಳೆದಿರುತ್ತಾರೆ ಮತ್ತು ಎದುರುದಾರರು ಪ್ರಕರಣದ ದಾರಿಯನ್ನು ತಪ್ಪಿಸುತ್ತಿದ್ದಾರೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಯು ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ವಶಪಡಿಸಿಕೊಂಡು, ಎದುರುದಾರರ ಮಾದರಿ ಧ್ವನಿಯನ್ನು ಸಹ ಪಡದುಕೊಂಡು, ಆ ಮಾದರಿ ಧ್ವನಿಯನ್ನು ಕಂಪ್ಯೂಟರ್ ಮೂಲಕ, ಸಿ.ಡಿ.ಗಳಿಗೆ ವರ್ಗಾಯಿಸಿ, ಆ ಸಿ.ಡಿ.ಗಳನ್ನು ವಶಕ್ಕೆ ಪಡೆದಿರುತ್ತಾರೆ. ಆ ಸಿ.ಡಿ.ಗಳು ಆರ್ಟಿಕಲ್ 14, 15, 16 ಮತ್ತು 17 ಆಗಿರುತ್ತವೆ. ನಂತರ ಎದುರುದಾರರನ್ನು ದಸ್ತಗಿರಿ ಮಾಡಿ ಎಲ್ಲರ ಸಮಕ್ಷಮ ಜಪ್ತಿ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಯು ಸಂಗ್ರಹಿಸಿದ ಮುದ್ದೆಮಾಲುಗಳಲ್ಲಿ ಫಿನಾಪ್ತಲಿನ್ ಅಂಶವಿರುವುದು ಕಂಡು ಬಂದಿರುತ್ತದೆ ಮತ್ತು ಧ್ವನಿ ವಿಶ್ಲೇಷಣಾ ವರದಿಯಲ್ಲಿ ಎದುರುದಾರರ ಮಾದರಿ ಧ್ವನಿಯು ಎದುರುದಾರರ ಧ್ವನಿಗೆ ತಾಳೆಯಾಗಿರುವುದಾಗಿ ಕಂಡುಬಂದಿರುತ್ತದೆ. ಆ ಕಾರಣ, ಎದುರುದಾರರು ನೀಡಿದ ಸಮಜಾಯಿಷಿಯು ತೃಪ್ತಿದಾಯಕವಾಗಿರುವುದಿಲ್ಲ. ತನಿಖಾಧಿಕಾರಿಯು ಸಾಕ್ಷಿದಾರರ ಹೇಳಿಕೆ, ತನಿಖಾ ದಾಖಲೆಗಳನ್ನು ಮತ್ತು ತಜ್ಞರ ವರದಿಗಳನ್ನು ಹಾಗೂ ಅಭಿಯೋಜನಾ ಮಂಜೂರಾತಿಯನ್ನು ಪಡೆದು ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

3. ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ದಿ: 13/12/2021ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು

ಅಲ್ಲಗಳೆದಿರುತ್ತಾರೆ ಮತ್ತು ಶ್ರೀ. ನರಸಿಂಗ ನಾಯ್ಕ್ ರವರು ಮುಖ್ಯ ಇಂಜಿನಿಯರ್ ರವರಿಗೆ ಬರೆದ ಪತ್ರ ಮತ್ತು ಎದುರುದಾರರು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಬರೆದ ಪತ್ರವನ್ನು ಲಗತ್ತಿಸಿರುತ್ತಾರೆ. ಎದುರುದಾರರು ಅವರ ಸಮಜಾಯಿಷಿಯ ಪ್ಯಾರಾ-15ರಲ್ಲಿ "ದಿ: 17/04/2018ರಂದು ಸಂಜೆ ನರಸಿಂಗ ನಾಯ್ಕರ ಕಡೆಯವರು ನಾಲ್ಕು ಜನ ಬಂದು ತಿಳಿಯದ ಹಾಗೆ ಹಣ ಇಟ್ಟು ಹೋಗಿರುತ್ತಾರೆ. ನಂತರ ಸ್ವಲ್ಪ ಸಮಯದಲ್ಲಿಯೇ ಪೋಲೀಸರು ಮತ್ತಿತರರು ನನ್ನ ಮನೆಗೆ ಬಂದು ನನ್ನನ್ನು ಒಂದು ಕಡೆ ಕೂರಿಸಿ ಕಂಪ್ಯೂಟರಿನಲ್ಲಿ ಏನೇನೋ ಟೈಪ್ ಮಾಡಿದರು. ನನ್ನನ್ನು ಏನೂ ಕೇಳಲಿಲ್ಲ ಹಾಗೂ ಏನೂ ಹೇಳಲು ಅವಕಾಶ ಕೊಡಲಿಲ್ಲ. ರಾತ್ರಿ 9.30ಕ್ಕೆ ಮೇಲಾಧಿಕಾರಿಗಳು ಬಂದರು, ಪೋಲೀಸರೊಡನೆ ಮಾತನಾಡಿ ಹೊರಟು ಹೋದರು. ಸುಮಾರು ಮಧ್ಯರಾತ್ರಿ 12.00 ಗಂಟೆ ವೇಳೆಗೆ ಶಿವಮೊಗ್ಗಕ್ಕೆ ಕರೆದುಕೊಂಡು ಹೋದರು" ಎಂದು ತಿಳಿಸಿರುತ್ತಾರೆ. ಎದುರುದಾರರು ನೀಡಿದ ಸಮಜಾಯಿಷಿಯು ಸಮರ್ಪಕವಾಗಿರುವುದಿಲ್ಲ. ಕಾರಣ ಧ್ವನಿ ಪರೀಕ್ಷಾ ವರದಿಯಲ್ಲಿ ಎದುರುದಾರರ ಧ್ವನಿಯು ತಾಳೆಯಾಗಿರುವುದಾಗಿ ಮತ್ತು ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆಮಾಲುಗಳಲ್ಲಿ ಫಿನಾಪ್ತಲೀನ್ ಅಂಶ ಇರುವುದು ಕಂಡುಬಂದಿರುತ್ತದೆ. ಈ ಎಲ್ಲಾ ಕಾರಣಗಳಿಂದ ಮತ್ತು ಸಮಜಾಯಿಷಿಯ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರ ವಿರುದ್ಧ ಇಲಾಖಾ ವಿಚಾರಣಾ ಮಾಡಲು ಕರ್ನಾಟಕ ನಾಗರಿಕ ಸೇವಾ -(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ 12(3) ರಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/1757/2021
ಪಿ.ಓ. ಎ.ಆರ್.ಇ–06

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

6/4/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.